# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್‌ನಂ: 0821 – 2417106
ಫ್ಯಾಕ್ಸ್ ನಂ: 0821 – 2417105
e-mail:fa@cescmysore.org
CIN:U40109KA2004SGCO35177

ನಿಗಮ ಕಾರ್ಯಾಲಯ,
ನಂ.29, ವಿಜಯ ನಗರ 2ನೇ ಹಂತ,
ಹಿನಕಲ್, ಮೈಸೂರು.570017.


ಸಂಖ್ಯೆ/ಮಾಂಕ:ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/18-19/ Cys-1260 ದಿನಾಂಕ: 15 DEC 2018

ಗತ್ತು:

## ಸುತ್ತೋಲೆ

**ವಿಷಯ:-** ಜಿ.ಎಸ್.ಟಿ ವಿವರಗಳನ್ನು ನಿಗಧಿತ ನಮೂನೆಯಲ್ಲಿ ತಪ್ಪಾಗಿ ದಾಖಲಿಸುತ್ತಿರುವ ಬಗ್ಗೆ.

***********

ದಿನಾಂಕ 01.07.2017 ರಿಂದ ಜಿ.ಎಸ್.ಟಿ ಕಾಯ್ದೆಯು ಜಾರಿಗೆ ಬಂದ ಹಿನ್ನಲೆಯಲ್ಲಿ ಕಂಪನಿಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಲೆಕ್ಕ ಘಟಗಳು ಕೇಂದ್ರ ಸರ್ಕಾರವು ನಿಗಧಿಪಡಿಸಿದ ಜಿ.ಎಸ್.ಟಿ ತೆರಿಗೆಯನ್ನು ಒಳ ಪೂರೈಕೆ ಮತ್ತು ಸೇವೆಗಳು ಹಾಗೂ ಹೊರ ಪೂರೈಕೆ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ, ಗ್ರಾಹಕರಿಂದ ಪಾವತಿಯಾದ ತೆರಿಗೆ ಮೊತ್ತದ ವಿವರಗಳನ್ನು ಸಂಗ್ರಹಿಸಿ ನಿಗಮ ಕಛೇರಿಗೆ ಸಲ್ಲಿಸುವಂತೆ ಈ ಹಿಂದೆ ಸೂಚಿಸಲಾಗಿತ್ತು. ಅದರಂತೆ ತಮ್ಮ ಎಲ್ಲಾ ಲೆಕ್ಕ ಘಟಕಗಳಿಂದ ನಿಗಧಿತ ನಮೂನೆಯಲ್ಲಿ ದಾಖಲಿಸಿದ ಜಿ.ಎಸ್.ಟಿ ತೆರಿಗೆ ಮೊತ್ತವನ್ನು ಕ್ರೋಢೀಕರಿಸಿ ಸರ್ಕಾರಕ್ಕೆ ಪಾವತಿಮಾಡಲಾಗುತ್ತಿದೆ.

ಒಳ ಪೂರೈಕೆ ಮತ್ತು ಸೇವೆಗಳು ಹಾಗೂ ಹೊರ ಪೂರೈಕೆ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಅನುಬಂಧಗಳನ್ನು ಸಿದ್ದಪಡಿಸಿ ನಿಗಮದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ. ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ ನಿಗಧಿತ ನಮೂನೆಗಳಲ್ಲೇ ಒಳ ಪೂರೈಕೆ ಮತ್ತು ಸೇವೆಗಳು ಹಾಗೂ ಹೊರ ಪೂರೈಕೆ ಮತ್ತು ಸೇವೆಗಳ ಸಂಬಂಧ ಸಂಗ್ರಹಿಸಿದ Taxable Value ಮತ್ತು ಜಿ.ಎಸ್.ಟಿ ಮೊತ್ತಗಳು ಸೇರಿದಂತೆ ಅಗತ್ಯವಾದ ಮಾಹಿತಿಗಳನ್ನು ನಿಗಧಿತ ನಮೂನೆಯಲ್ಲಿ ದಾಖಲಿಸಿ, ಆನ್‌ಲೈನ್ ಮೂಲಕ ಹಾಗೂ ದೃಢೀಕರಿಸಿದ ಪ್ರತಿಗಳನ್ನು ಪ್ರತಿ ತಿಂಗಳು ತಪ್ಪದೇ ನಿಗಮ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ ವೆಬ್‌ಸೈಟ್‌ನಲ್ಲಿ ತಮ್ಮ ಕಛೇರಿಗಳಿಂದ ಅಪ್‌ಲೋಡ್ ಮಾಡಿದ ಪೂರ್ಣ ವಿವರಗಳನ್ನು ಈ ಕಛೇರಿಯಲ್ಲಿ ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನ್ಯತೆಗಳನ್ನು ಗಮನಿಸಲಾಗಿರತ್ತದೆ.

1) ವಿಭಾಗಗಳು ತಮ್ಮ ವ್ಯಾಪ್ತಿಗೆ ಒಳಪಡುವ ಉಪ ವಿಬಾಗಗಳು/ಲೆಕ್ಕ ಶಾಖೆಗಳಲ್ಲಿ ಹೊರ ಪೂರೈಕೆ ಮತ್ತು ಸೇವೆಗಳ ಸಂಬಂಧ ಸಂಗ್ರಹಿಸಿದ ಮೊತ್ತವು ಸೇರಿದಂತೆ ಪೂರ್ಣ ವಿವರಗಳನ್ನು ಪರಿಶೀಲಿಸದೇ ನಿಗಮ ಕಛೇರಿಯ ವೆಬ್‌ಸೈಟ್‌ನಲ್ಲಿ ನಿಗಧಿತ ನಮೂನೆಯಲ್ಲಿ ದಾಖಲಿಸುತ್ತಿರುವುದು.

2) ನಿಗಧಿತ ನಮೂನೆಯಲ್ಲಿ ತೋರಿಸಿರುವ ಕಾಲಂನ ಅಡಿಯಲ್ಲಿ ಸಂಬಂಧಪಟ್ಟ ವಿವರಗಳನ್ನು ಸಮಂಜಸವಾಗಿ ದಾಖಲಿಸದೇ ಇರುವುದು.

3) ಗ್ರಾಹಕರ/ಗುತ್ತಿಗೆದಾರರ/ಜಿ.ಎಸ್.ಟಿ. ನೋಂದಣಿ ಹೊಂದಿರುವ ಜಿ.ಎಸ್.ಟಿ ನಂಬರ್‌ಗಳನ್ನು ಕೇಂದ್ರ ಸರ್ಕಾರದ ಜಿ.ಎಸ್.ಟಿ ವೆಬ್‌ಸೈಟ್‌ನಲ್ಲಿ ಪರಿಶೀಲಿಸದೆ ತಪ್ಪಾಗಿ ನಮೂದಿಸಲಾಗುತ್ತಿರುವುದು

4) ಗ್ರಾಹಕರ ಜಿ.ಎಸ್.ಟಿ ನಂಬರ್‌ಗಳನ್ನು ತಪ್ಪಾಗಿ ಕಲೆಹಾಕಿರುವ ಸಂದರ್ಭಗಳಲ್ಲಿ, B2B ನಲ್ಲಿ ದಾಖಲಿಸಬೇಕಾಗಿರುವ ಮಾಹಿತಿಯನ್ನು B2CSನಲ್ಲಿ ನಮೂದಿಸಿರುವುದು ಕಂಡುಬಂದಿರುತ್ತದೆ.

5) ಇದರಿಂದಾಗಿ ಸಂಬಂಧಿಸಿದ ಸಂಸ್ಥೆ(Firm)ಗಳಿಗೆ ಹೊಂದಿರುವ ಜಿ.ಎಸ್.ಟಿ ಟಿನ್ ನಂಬರ್‌ಗಳನ್ನು ತಪ್ಪಾಗಿ/ನಮೂದಿಸದೇ ಇದ್ದಲ್ಲಿ Input Tax Credit ತೆಗೆದುಕೊಳ್ಳಲು ಸದರಿ ಸಂಸ್ಥೆ(Firm)ಗಳಿಗೆ ಸಾಧ್ಯವಾಗುವುದಿಲ್ಲ.

6) ಕೆಲವು ವಿಭಾಗಗಳಲ್ಲಿ ಜಿ.ಎಸ್.ಟಿ ಮಾಹಿತಿಯನ್ನು ಅಪ್‌ಲೋಡ್ ಮಾಡುವಾಗ ವೆಬ್‌ಸೈಟ್‌ನಲ್ಲಿರುವ ನಿಗಧಿತ ನಮೂನೆಗಳನ್ನು ಬದಲಾಯಿಸುತ್ತಿರುವುದು ಕಂಡುಬಂದಿರುತ್ತದೆ.

7) B2B ನಮೂನೆಯಲ್ಲಿ ತಿಂಗಳಿನ ಪತ್ರಿ ವ್ಯವಹಾರಕ್ಕೂ ಪ್ರತ್ಯೇಕವಾಗಿ ಇನ್‌ವಾಯ್ಸ್ ಸಂಖ್ಯೆ ನೀಡಬೇಕು ಅಥವಾ ಒಂದು ಜಿ.ಎಸ್.ಟಿ ಸಂಖ್ಯೆಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರಕ್ಕೂ ಕನಿಷ್ಠ ಒಂದು ಪ್ರತ್ಯೇಕವಾಗಿ ಇನ್‌ವಾಯ್ಸ್ ಸಂಖ್ಯೆ ನೀಡಿ, ಸದರಿ ಇನ್‌ವಾಯ್ಸ್‌ಗಳ ಮೂಲ ಪ್ರತಿಗಳ, ತಿಂಗಳುವಾರು ದಾಖಲಾತಿ ಕಡತವನ್ನು ಲೆಕ್ಕ ಘಟಕಗಳಲ್ಲಿ ಆಡಿಟ್ ಪರಿಶೀಲನೆಗೆ ಒಳಪಡಿಸಿ, ನಂತರ ತಮ್ಮ ಲೆಕ್ಕ ಘಟಕಗಳಲ್ಲಿ ನಿರ್ವಹಿಸುವಂತೆ ಸೂಚಿಸಲಾಗಿತ್ತು. ಆದರೆ, ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ನಿರ್ವಹಿಸುತ್ತಿಲ್ಲದಿರುವುದು ಈ ಕಛೇರಿ ಗಮನಕ್ಕೆ ಬಂದಿರುತ್ತದೆ.

8) Buyback Scheme ನಲ್ಲಿ ರದ್ದಿ ಸಾಮಗ್ರಿಗಳನ್ನು ಮಾರಟವೆಂದು ಪರಿಗಣಿಸಿ ಪ್ರತ್ಯೇಕವಾದ ತೆರಿಗೆ ಇನ್‌ವಾಯ್ಸ್ ಮಾಡಬೇಕಾಗಿರುತ್ತದೆ. ಆದರೆ ಖರೀದಿ/ಸರಬರಾಜುದಾರರಿಗೆ ಹುಂಡಿಯ ಮೊತ್ತದಲ್ಲಿ ರದ್ದಿ ಸಾಮಗ್ರಿಗಳನ್ನು ಮಾರಟದ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳುತ್ತಿರುವುದು ಕಂಡುಬಂದಿರುತ್ತದೆ. ಬದಲಿಗೆ HSN code ಸಂಖ್ಯೆವಾರ ಸಾಮಗ್ರಿಗಳನ್ನು ವಿಂಗಡಿಸಿ ಪ್ರತ್ಯೇಕ ಇನ್‌ವಾಯ್ಸ್ ಸಂಖ್ಯೆ ನೀಡುವಂತೆ ಸೂಚಿಸಲಾಗಿದೆ.

9) GSTR 2A ಮಾಹಿತಿಯನ್ನು ಈ ಹಿಂದೆ ತಮ್ಮ ಇ–ಮೇಲ್ ಐಡಿಗೆ ಮೇಲ್ ಮಾಡಲಾಗಿದ್ದು, ಮಾಹಿತಿಯನ್ನು ಪರಿಶೀಲಿಸಿ, ಈ ಕಛೇರಿಗೆ ವರದಿ ನೀಡುವಂತೆ ಸೂಚಿಸಿದ್ದರು ಸಹಾ, ಇದುವರೆವಿಗೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

10) 01.07.2017ರ ನಂತರ, ಸರಬರಾಜು/ಖರೀದಿದಾರ ಬಿಲ್ಲುಗಳಲ್ಲಿ ಕಡಿತಗೊಳಿಸಿರುವ ದಂಡದ ಶುಲ್ಕಕ್ಕೆ ಜಿ.ಎಸ್.ಟಿ ಅನ್ವಹಿಸುತ್ತದೆ ಎಂದು ಸೂಚಿಸಲಾಗಿದ್ದರೂ ಸಹ ಇದುವರೆವಿಗೂ ಅದೇ ತಿಂಗಳಿನಲ್ಲಿ ಕಡಿತಗೊಳಿಸಲಾದ ಮೊತ್ತವನ್ನು ಜಿ.ಎಸ್.ಟಿ ನಮೂನೆಯಲ್ಲಿ ದಾಖಲಿಸುತ್ತಿಲ್ಲ. ಅಲ್ಲದೆ, 01.07.2017ರ ನಂತರ ಕಡಿತಗೊಳಿಸಿರುವ ದಂಡದ ಶುಲ್ಕಕ್ಕೆ ಜಿ.ಎಸ್.ಟಿ ಮೊತ್ತವನ್ನು, ಅದೇ ಮಾಹೆಯಲ್ಲಿ ನೀಡದೆ, ನಂತರದ ದಿನಗಳಲ್ಲಿ ನೀಡಲಾಗುತ್ತಿದೆ. ಇದರಿಂದಾಗಿ ಬರುವ ಜಿ.ಎಸ್.ಟಿ ಮೊತ್ತದ ಮೇಲಿನ ಬಡ್ಡಿ ಮತ್ತು ದಂಡ ಮೊತ್ತಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹೊಣೆಗಾರರಾಗಿರುತ್ತೀರಿ. ಈ ಹಿನ್ನಲೆಯಲ್ಲಿ ಮೇಲ್ಕಂಡ ನ್ಯೂನತೆಗಳನ್ನು ಪುನರಾವರ್ತನೆಯಾಗದಂತೆ ಲೆಕ್ಕಘಟಕಗಳು ಕ್ರಮ ಜರುಗಿಸತಕ್ಕದ್ದು.

ಮುಂದುವರೆದು, ಒಳ ಪೂರೈಕೆ/ಸೇವೆಗಳಿಗೆ ಮತ್ತು ಹೊರ ಪೂರೈಕೆ/ಸೇವೆಗಳಿಗೆ ಸಂಬಂಧಿಸಿದಂತೆ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ ಪೂರ್ಣ ವಿವರಗಳ ಆಡಿಟ್ ದೃಢೀಕೃತ ಮೂಲ ಪ್ರತಿಗಳನ್ನು ಪ್ರತಿ ತಿಂಗಳು ತಪ್ಪದೇ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಮುಖ್ಯ ಆರ್ಥಿಕ ಅಧಿಕಾರಿ.

ಪ್ರತಿಗಳು:-

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ, ನಿಗಮ ಕಛೇರಿ ಮೈಸೂರು,ರವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್ (ವಿ) ಕಾ ಮತ್ತು ಪಾ, ವಲಯ ಕಛೇರಿ, ಚಾವಿಸನಿನಿ, ಮೈಸೂರು.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ),ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು(ಲೆಕ್ಕ ಮತ್ತು ಕಂ), ಚಾವಿಸನಿನಿ, ನಿಗಮ ಕಛೇರಿ, ಮೈಸೂರು.
- ಉಪ ಪ್ರಧಾನ ವ್ಯವಸ್ಥಾಪಕತು(ಎಂ.ಐ.ಎಸ್) ನಿಗಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
- ಆಪ್ತ ಕಾರ್ಯದರ್ಶಿ, ವ್ಯನಿ/ನಿ(ತಾಂ)/ಮುಆಅ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಚಾವಿಸನಿನಿ- ತಮ್ಮ ಅಧೀನ ಕಛೇರಿಗಳಿಗೆ ಸದರಿ ಸುತ್ತೋಲೆಯನ್ನು ರವಾನಿಸತಕ್ಕದ್ದು.
- ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ವಿಭಾಗಗಳು, ಚಾವಿಸನಿನಿ.
- ಎಲ್ಲಾ ಲೆಕ್ಕಾಧಿಕಾರಿಗಳು (ಆಂ ಪ) ಕಾ ಮತ್ತು ಪಾ, ವಿಭಾಗಗಳು/ವೃತ್ತಗಳು/ಚಾವಿಸನಿನಿ.
- ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂ ನಿ) ನಿಗಮ ಕಛೇರಿ, ಚಾವಿಸನಿನಿ. ಮೈಸೂರು.
- ಮು.ಕ.